**ಸಾಕ್ಷಿ ಯನ್ನು ದಿಃ06.02.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಸಿ ಎಸ್ ಸಿ ವಕೀಲರಿಂದ:**

ದಾವಾ ಆಸ್ತಿಯ ಚೆಕ್ಕುಬಂದಿ, ವಿಸ್ತೀರ್ಣ ಸರಿ ಇದೆಯೇ ಎಂದರೆ ಸಾಕ್ಷಿಯು ಅದು ಅಸ್ತಿತ್ವದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಆಸ್ತಿ ಗ್ರಾಮಾ ಠಾಣಾದಲ್ಲಿ ಇದ್ದು, ನಮ್ಮ ಆಸ್ತಿಯ ಯಾವ ದಿಕ್ಕಿಗೂ ವಾದಿಗಳ ಆಸ್ತಿ ಬರುವುದಿಲ್ಲ. ದಾವಾ ಆಸ್ತಿ ಅಸ್ತಿತ್ವದಲ್ಲಿ ಇಲ್ಲದ ಕಾರಣ, ಸದರಿ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು, ಹಿತಾಸಕ್ತಿ ಇರುವುದಿಲ್ಲ. ವಾದಿ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ.

2. ಕಪನಯ್ಯನ ಎರಡನೇ ಮಗ ನಂಜುಂಡಯ್ಯ ಎಂದರೆ ವಾದಿಯ ಮಾವ ಎಂದರೆ ಸರಿಯಲ್ಲ. ವಾದಿಯ ಮಾವ ಮತ್ತು ಆತನ ಸಹೋದರ ಹೊನ್ನಯ್ಯ ನಿಪಿ.3ರಂತೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಿಪಿ.3ರಲ್ಲಿ ಸರ್ವೆ ನಂ.127/3ರಲ್ಲಿ 33 ಗುಂಟೆ ಮತ್ತು 38 ಗುಂಟೆ ವಾದಿಯ ಮಾವನ ಭಾಗಕ್ಕೆ ಬಂದಿತ್ತು ಎಂದರೆ ಸಾಕ್ಷಿಯು ತಾನು ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಿಪಿ.3ರಲ್ಲಿನ 33 ಗುಂಟೆ ಚೆಕ್ಕುಬಂದಿಯನ್ನು ಸಾಕ್ಷಿಗೆ ಓದಿ ಹೇಳಲಾಗಿ, ಸಾಕ್ಷಿ ಅದು ಅಸ್ತಿತ್ವದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಗ್ರಾಮಾ ಠಾಣಾಕ್ಕೆ ಹೊಂದಿಕೊಂಡಂತೆ ಯಾವುದೇ ಸರ್ವೆ ನಂಬರ್ ಇರುವುದಿಲ್ಲ. ಸದರಿ ಸರ್ವೆ ನಂ.127 ರಲ್ಲಿ ಎಷ್ಟು ಪೋಡಾಗಿದೆ ಎಂದು ನನಗೆ ಗೊತ್ತಿಲ್ಲ.

ಸರ್ವೆ ನಂ.127 ನಮ್ಮ ಊರಿನಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ. ನಾನು ನಿಪಿ.2ರ ದಾಖಲೆಯನ್ನು ನೋಡಿರುವುದಿಲ್ಲ. ಸರ್ವೆ ನಂ.127 ರ ಪೋಡುಗಳು ಸರಿ ಇಲ್ಲ ಎಂದು ನಾವು ಪ್ರಶ್ನೆ ಮಾಡಿರುವುದಿಲ್ಲ. ಸರ್ವೆ ನಂ.127ರಲ್ಲಿ ಗ್ರಾಮಾ ಠಾಣಾಗೆ ಭೂ ಸ್ವಾಧೀನ ಆಗಿದೆ. ಆ ರೀತಿ ಭೂ ಸ್ವಾಧೀನ ಯಾವಾಗ ಆಗಿದೆ ಮತ್ತು ಎಷ್ಟು ಆಗಿದೆ ಎಂದು ನನಗೆ ಗೊತ್ತಿಲ್ಲ. ಆ ಕುರಿತು ನಾನು ದಾಖಲೆಗಳನ್ನು ನೋಡಿರುವುದಿಲ್ಲ.

3. ಸರ್ವೆ ನಂ.127ರಲ್ಲಿ ಎಷ್ಟು ಮನೆಗಳಿವೆ ಎಂದು ನಾನು ಲೆಕ್ಕ ಹಾಕಿಲ್ಲ. ನಮ್ಮ ಊರಿನಲ್ಲಿ 150 ಮನೆಗಳಿದ್ದು, ಅಷ್ಟು ಮನೆಗಳು ಸರ್ವೆ ನಂ.127ರಲ್ಲಿ ಇಲ್ಲ. ಗ್ರಾಮ ಠಾಣಾದ ಉತ್ತರಕ್ಕಿರುವುದೇ ಸರ್ವೆ ನಂ.127 ಎಂದರೆ ಸಾಕ್ಷಿಯು ಸೃಷ್ಟಿ ಮಾಡಿಕೊಂಡಿರುತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.127ರಲ್ಲಿ 3 ಎಕರೆ 31 ಗುಂಟೆ ಮತ್ತು 9 ಗುಂಟೆ ಕರಾರು ಇರುತ್ತದೆ ಎಂದರೆ ಸಾಕ್ಷಿಯು ಆಸ್ತಿಯೇ ಅಸ್ತಿತ್ವದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.127ರಲ್ಲಿ 1 ರಿಂದ 3 ಮತ್ತು 3(ಎ) ಇಂದ (ಇ) ಎಂದು ಪೋಡಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.127/3ಡಿ ವಾದಿಯ ಮಾವನಿಗೆ ಬಂದಿದ್ದ ಆಸ್ತಿ ಎಂದರೆ ಸಾಕ್ಷಿಯು ಆಸ್ತಿಯೇ ಅಸ್ತಿತ್ವದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಗ್ರಾಮ ಠಾಣಾದ ನಂತರ ಯಾವ ಆಸ್ತಿ ಇದೆ ಮತ್ತು ಅದರ ನಂಬರ್ ಏನು ಎಂದು ನನಗೆ ಗೊತ್ತಿಲ್ಲ. ಗ್ರಾಮ ಠಾಣಾಕ್ಕೆ ಹೊಂದಿಕೊಂಡ

ಆಸ್ತಿಗಳ ಕುರಿತು ಸರ್ವೆ ನಕಾಶೆಗಳನ್ನು ನಾನು ನೋಡಿರುವುದಿಲ್ಲ.

4. ಗ್ರಾಮ ಠಾಣಾದಲ್ಲಿ ಸಾವಂದಯ್ಯನವರ ಮನೆ ಇರುತ್ತದೆ. ಸಾವಂದಯ್ಯನವರ ಮನೆಯ ಪೂರ್ವಕ್ಕೆ ಹೊನ್ನಯ್ಯನ ಮನೆ, ಪಶ್ಚಿಮಕ್ಕೆ ಗೊತ್ತಿಲ್ಲ, ಉತ್ತರಕ್ಕೆ ಗೊತ್ತಿಲ್ಲ, ದಕ್ಷಿಣಕ್ಕೆ ಗೊತ್ತಿಲ್ಲ. ಸಾವಂದಯ್ಯನವರ ಮನೆಯ ಉತ್ತರಕ್ಕೆ ಸರ್ವೆ ನಂ.127 ಬರುತ್ತದೆ ಎಂದರೆ ಸರಿಯಲ್ಲ.

5. ನಮ್ಮ ಆಸ್ತಿಯ ಖಾತಾ ನಂ.110/90. ಸದರಿ ಆಸ್ತಿಯ ಅಳತೆ ಪೂರ್ವ ಪಶ್ಚಿಮ 54, ಉತ್ತರ ದಕ್ಷಿಣ 110 ಇರುತ್ತದೆ. ಸದರಿ ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಇರುತ್ತದೆ. ನಮ್ಮ ಆಸ್ತಿ ಗ್ರಾಮ ಠಾಣಾದ ಉತ್ತರದ ದಿಕ್ಕಿಗೆ ಬರುತ್ತದೆ. ನಮ್ಮ ಆಸ್ತಿಯ ದಕ್ಷಿಣಕ್ಕೆ ಚಿಕ್ಕಮರಯ್ಯ ಮತ್ತು ಗಂಗಪ್ಪನವರ ಮನೆ ಇದೆ. ಸದರಿ ಚಿಕ್ಕಮರಯ್ಯ ಮತ್ತು ಗಂಗಪ್ಪನವರ ಮನೆಯೂ ಗ್ರಾಮ ಠಾಣಾ ವ್ಯಾಪ್ತಿಯಲ್ಲಿಯೇ ಇರುತ್ತದೆ. ನಮ್ಮ ಆಸ್ತಿಯ ಪೂರ್ವಕ್ಕೆ ಹೊನ್ನಯ್ಯನ ಮನೆ, ಪಶ್ಚಿಮಕ್ಕೆ ಬಸಮ್ಮನ ಮನೆ. ನಮ್ಮ ಮನೆಯಿರುವ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಆಸ್ತಿ ನಮ್ಮ ತಾತ ಹೊನ್ನಯ್ಯನಿಗೆ ಸೇರಿದ್ದು. ನಮ್ಮ ತಾತನಿಗೆ ಮೂರು ಜನ ಮಕ್ಕಳು. ನಮ್ಮ ತಾತನ ಮಕ್ಕಳ ನಡುವೆ 1997ರಲ್ಲಿ ವಿಭಾಗವಾದಾಗ ನಾನು ಹೇಳಿದ ಆಸ್ತಿ ನನ್ನ ತಂದೆಯ ಭಾಗಕ್ಕೆ ಬಂದಿತ್ತು. ಸದರಿ ವಿಭಾಗ ಪಾರಿಕತ್ ನಂತೆ ಆಗಿತ್ತು. ಸದರಿ ಪಾರಿಕತ್

ಅನ್ನು ನನ್ನ ತಂದೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಪಾರಿಕತ್ ಯಾರ ಬಳಿ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ತಕರಾರಿನಲ್ಲಿ ನಾನು ಹೇಳಿದ ಆಸ್ತಿ ನನ್ನ ತಾತನ ಆಸ್ತಿ ಮತ್ತು ನನ್ನ ತಂದೆಯ ಭಾಗಕ್ಕೆ ಬಂದ ಆಸ್ತಿ ಎಂದು ಹೇಳಿ ಬರೆಸಿದ್ದೇನೆ. ಸದರಿ ಆಸ್ತಿ ನನ್ನ ತಾತನ ಹೆಸರಿನಲ್ಲಿದ್ದ ಕುರಿತು ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

6. ನಿಡಿ.6 ನನ್ನ ತಂದೆಯ ಹೆಸರಿಗೆ ಹೇಗೆ ವರ್ಗಾವಣೆಯಾಗಿರುತ್ತದೆ ಎಂದು ತೋರಿಸಲು ಮೂಲ ದಾಖಲೆಯನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು, ಹೌಸ್ ಲಿಸ್ಟ್ ನಂತೆ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ಹೌಸ್ ಲಿಸ್ಟ್ ದಾಖಲೆಯನ್ನು ಹಾಜರುಪಡಿಸಿಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆಯೇ ಎಂದರೆ ಸಾಕ್ಷಿಯು ಹುಡುಕಬೇಕು ಎಂದು ನುಡಿಯುತ್ತಾರೆ. ನಿಡಿ.6 1997 ರಿಂದ ಬರುತ್ತಿದೆ. 1997ಕ್ಕಿಂತ ಹಿಂದೆ ಯಾರ ಹೆಸರು ಇತ್ತು ಎಂದು ಗೊತ್ತಿಲ್ಲ.

7. ನಿಡಿ.5ರ ದಾವೇಯಲ್ಲಿ ನನ್ನ ತಂದೆ ಆಸ್ತಿ ಹೇಗೆ ಬಂತು ಎಂದು ಬರೆಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಡಿ.1ರಲ್ಲಿರುವ ದೇವಸ್ಥಾನ ಸರ್ವೆ ನಂ.127ರಲ್ಲಿ ಇರುತ್ತದೆ ಎಂದರೆ ಸರಿ. ಸದರಿ ದೇವಸ್ಥಾನದ ದಕ್ಷಿಣಕ್ಕೆ ಇರುವುದೇ ಗ್ರಾಮಾ ಠಾಣಾ ಎಂದರೆ ಸರಿ. ಸದರಿ

ದೇವಸ್ಥಾನ ಮತ್ತು ಅದಕ್ಕೆ ಹೊಂದಿಕೊಂಡಂತೆ ಇರುವ ಜಮೀನು ವಾದಿಗಳಿಗೆ ಸೇರಿದ್ದು ಎಂದರೆ ಸಾಕ್ಷಿಯು ಅಲ್ಲಿ ಯಾವುದೇ ಜಮೀನು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.4ರಲ್ಲಿ ವಾದಿಯ ಮಾವನಿಗೆ 31 ಗುಂಟೆ ಜಮೀನು ಇದೆ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಆಸ್ತಿಯೇ ಅಸ್ತಿತ್ತದಲ್ಲಿ ಇಲ್ಲ, ಅದನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.4ನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ಅಸ್ತಿತ್ತದಲ್ಲಿ ಇರದ ಕಾರಣ, ಹೇಳುತ್ತಿದ್ದೇನೆ. ನಿಪಿ.4 ಅಸ್ತಿತ್ತದಲ್ಲಿ ಇಲ್ಲ ರದ್ದು ಮಾಡಿ ಎಂದು ಸಂಬಂಧಪಟ್ಟ ಇಲಾಖೆಗೆ ಅರ್ಜಿ ನೀಡಿಲ್ಲ. ನಿಪಿ.4 ಇಂದಿಗೂ ವಾದಿಯ ಮಾವನ ಹೆಸರಿನಲ್ಲಿ ಬರುತ್ತಿದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

8. ದಾವಾ ಆಸ್ತಿ ಎಂದಿಗೂ ಕಂದಾಯ ಜಮೀನು ಆಗಿದೆ ಎಂದರೆ ಸರಿಯಲ್ಲ. ನಿಡಿ.1ರ ದೇವಸ್ಥಾನದ ಬಾಗಿಲು ಪೂರ್ವಕ್ಕಿದೆ. ನಿಡಿ.1ರಲ್ಲಿ ಕಾಣುವ ಮನೆಗಳು ದಕ್ಷಿಣಕ್ಕಿವೆ ಎಂದರೆ ಸರಿ. ಸದರಿ ಮನೆಗಳು ಗ್ರಾಮ ಠಾಣಾಗೆ ಬರುತ್ತವೆ ಎಂದರೆ ಸರಿ. ನಿಡಿ.4 ರ ಮನೆ ಸರ್ವೆ ನಂ.127/3ಡಿ ನಲ್ಲಿ ಇರುತ್ತದೆ.

9. ನಿಡಿ.2ರ ದೇವಸ್ಥಾನದ ಉತ್ತರ ದಿಕ್ಕಿಗೆ ಶಾಲೆ ಇರುತ್ತದೆ. ನಿಡಿ.1 ರಿಂದ 4ರಲ್ಲಿ ಕಾಣುವ ಆಸ್ತಿಗಳು ನನ್ನ ಪ್ರಕಾರ 10 ಗುಂಟೆಯಲ್ಲಿ ಬರುತ್ತದೆ. ನಿಡಿ.1 ರ ದಕ್ಷಿಣಕ್ಕೆ ನಮ್ಮ

ಖಾಲಿ ನಿವೇಶನವಿದ್ದು, ಅದು ಆ ಪೋಟೋದಲ್ಲಿ ಕಾಣುವುದಿಲ್ಲ. ಮಾದೇವಮ್ಮನ ದೇವಸ್ಥಾನಕ್ಕೆ ಹೊಂದಿಕೊಂಡಂತೆ ನಮ್ಮ ನಿವೇಶನ ಇರುವುದಿಲ್ಲ. ಸರ್ವೆ ನಂ.127/3ಡಿನಲ್ಲಿ ಸಿಸಿ ರಸ್ತೆ, ಚರಂಡಿ ಆಗಿರುತ್ತದೆ. ಸಿಸಿ ರಸ್ತೆ ಮತ್ತು ಚರಂಡಿ ನಮ್ಮ ನಿವೇಶನದಲ್ಲಿ ಆಗಿಲ್ಲ. ನಿಡಿ.1ರಲ್ಲಿ ಹಸಿರು ಬಣ್ಣದ ಗೋಡೆ ಇರುವ ಮನೆ ಬಸಮ್ಮನವರ ಮನೆ. ನಿಡಿ.1ರಲ್ಲಿ ಮಾದೇವಮ್ಮನ ದೇವಸ್ಥಾನ ಮತ್ತು ಹಸಿರು ಬಣ್ಣದ ಗೋಡೆ ಆಸ್ತಿಯ ನಡುವಿನ ಜಾಗ ಮಹದೇವಯ್ಯನವರಿಗೆ ಸೇರಿರುತ್ತದೆ. ಮಾದೇವಮ್ಮನ ದೇವಸ್ಥಾನ ಮತ್ತು ಹಸಿರು ಬಣ್ಣದ ಗೋಡೆಯ ನಡುವೆ ಒಬ್ಬರ ನಿವೇಶನ ಹೊರತುಪಡಿಸಿ 10 ಅಡಿ ಜಾಗ ಇರುತ್ತದೆ. ಸದರಿ ಹಸಿರು ಬಣ್ಣದ ಗೋಡೆಯ ಆಸ್ತಿಯ ಪೂರ್ವಕ್ಕೆ ನಮ್ಮ ಮನೆ ಇದೆ. ನಮ್ಮ ನಿವೇಶನಕ್ಕೆ ಲಗತ್ತಾಗಿ ಮಾದೇವಮ್ಮನ ದೇವಸ್ಥಾನ ಬರುವುದಿಲ್ಲ. ನಮ್ಮ ಖಾಲಿ ನಿವೇಶನ ಗ್ರಾಮಾ ಠಾಣಾಕ್ಕೆ ಸೇರಿರುತ್ತದೆ. ನಮ್ಮ ನಿವೇಶನದ ಕುರಿತು ಭಾವಚಿತ್ರಗಳನ್ನು ಹಾಜರುಪಡಿಸಿಲ್ಲ.

10. ದಾವಾ ಆಸ್ತಿ ಕಂದಾಯ ಜಮೀನು ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ಗ್ರಾಮಾ ಠಾಣಾ ಇದ್ದರೂ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.6ನ್ನು ದಾವಾ ಆಸ್ತಿಯನ್ನು ಲಪಟಾಯಿಸಲು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ.6ರ ಆಸ್ತಿ ನಮ್ಮ ಕುಟುಂಬಕ್ಕೆ ಇರಲಿಲ್ಲ ಮತ್ತು ಅದನ್ನು ನಾವು ವಿಭಾಗ

ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಗ್ರಾಮಾ ಠಾಣಾಗೆ ಹೊಂದಿಕೊಂಡಿರುವುದನ್ನು ದುರುಪಯೋಗಪಡಿಸಿಕೊಂಡು ನಿಡಿ.6 ರ ಮೂಲಕ ದಾವಾ ಆಸ್ತಿಯನ್ನು ಕಬಳಿಸಲು ಪ್ರಯತ್ನ ಪಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸತ್ಯವನ್ನು ಮರೆಮಾಚಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.